ಹೆಚ್ಚುವರಿ ಹಿರಿಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೀದರ
**ಸಿ.ಸಿ. ನಂ. 2204/2022**

**ದಿ: 26-06-2023**
**CW-6. PW-6.**

ಸಾಕ್ಷಿಯ ಹೆಸರು : ಪ್ರವೀಣ
ತಂದೆ ಹೆಸರು : ಶಂಕರೆಪ್ಪ
ವಯಸ್ಸು : 58 ವರ್ಷ
ಉದ್ಯೋಗ : ಕೂಲಿ ಕೆಲಸ,
ವಾಸಸ್ಥಳ : ಕಾಡವಾದ ಗ್ರಾಮ, ತಾ. ಬೀದರ.

ಸಾಕ್ಷಿಯನ್ನು ಇಂದು ದಿ**: 26-06-2023** ರಂದು ಕರೆಸಿ**,** ಪ್ರಮಾಣಿಕರಿಸಲಾಯಿತು**.**

**:-**ಸಾಕ್ಷಿಯ ಮುಖ್ಯ ವಿಚಾರಣೆ ಹಿರಿಯ ಸಸಅ ಅವರಿಂದ**:-**

1. ಚಾಸಾ-1, 4 ಹಾಗೂ 5 ಪರಿಚಯವಿಲ್ಲ, ಆರೋಪಿತರ ಪರಿಚಯವಿದೆ. ಈ ಕೇಸ್ ನ ವಿಚಾರ ಗೊತ್ತಿಲ್ಲ, ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಹಿರಿಯ ಸಸಅ ರವರು ಕೋರಿದ್ದು ಅನುಮತಿ ನೀಡಲಾಯಿತು).

ಪಾಟೀ ಸವಾಲು**:** ಸಾಕ್ಷಿಯ ಮುಖ್ಯ ವಿಚಾರಣೆ ಹಿರಿಯ ಸಸಅ ಅವರಿಂದ**:-**

**2.** ದಿ: 16-03-2022 ರಂದು ಮಧ್ಯಾಹ್ನ 2-00 ಗಂಟೆಗೆ ಚಾಸಾ-1 ವರು ನನಗೆ ಫೋನ್ ಮಾಡಿ, ಅವರ ಹೊಲದಲ್ಲಲಿ ಮಾವಿನ ಗಿಡದ ಸುತ್ತಮುತ್ತ ಮಣ್ಣು ಹಾಕುವುದು ಇದೆ ನೀನು ಬಾ ಎಂದು ಕರೆದ ಮೇರೆಗೆ ನಾನು ಅವರ ಹೊಲಕ್ಕೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ಆಗ ಅವರು ಬೀದರನಿಂದ ಅವರ ಜೊತೆಯಲ್ಲಿ ಚಾಸಾ-4 & 5 ರವರನ್ನು ಕರೆದುಕೊಂಡು ಬಂದಿದ್ದು ಮಾವಿನ ಗಿಡದ ಸುತ್ತ ಬದುವಿನ ಮೇಲೆ ಮಣ್ಣು ಹಾಕುತ್ತಿದ್ದಾಗ ಸಂಜೆ -5 ಗಂಟೆಗೆ 1 ನೇ ಆರೋಪಿ ಚಾಸಾ-1 ರ ಹೊಲಕ್ಕೆ ಅತೀಕ್ರಮ ಪ್ರವೇಶ ಮಾಡಿ ಚಾಸಾ-1 ರವರಿಗೆ ನೀವು ಯಾರಿದ್ದೀರಿ, ಸೂಳೆ ಮಕ್ಕಳೆ ಇದು ನನ್ನ ಹೊಲವಿದೆ ನೀವು

ಇಲ್ಲಿಂದ ಹೋಗಿರಿ ಇಲ್ಲಾ ಅಂದರೆ ನೋಡು ನಿಮಗೆ ಜೀವ ಸಹಿತ ಬಿಡುವುದಿಲ್ಲ ಅಂತ ಜೀವದ ಬೆದರಿಕೆ ಹಾಕಿದ್ದನು ಎಂದರೆ ಸರಿಯಲ್ಲ. ಚಾಸಾ-1 ರವರು 1 ನೇ ಆರೋಪಿಗೆ ಯಾಕೊ ಹಿಗೆ ಮಾತನಾಡುತ್ತಿದ್ದಿ ಇದು ನನ್ನ ಹೊಲ ಎಂದು ಹೇಳುತ್ತಿದ್ದಾಗ 2 & 3 ನೇ ಆರೋಪಿತರು ಬಂದು ಸೂಳೆ ಮಕ್ಕಳೆ ರಂಡಿ ಮಕ್ಕಳೆ ಅಂತ ಅವಾಚ್ಯ ಶಬ್ದಗಳಿಂದ ಬೈದಿದ್ದು ನೀವು ಇಲ್ಲಿಂದ ಹೋಗಿರಿ ಇಲ್ಲಾ ಅಂದರೆ ನಿಮಗೆ ಜೀವ ಸಹಿತ ಬಿಡುವುದಿಲ್ಲ ಅಂತ ಜೀವ ಬೆದರಿಕೆ ಹಾಕಿದ್ದರು ಎಂದರೆ ಸರಿಯಲ್ಲ. ಆಗ ನಾನು ಚಾಸಾ-4 & 5 ರವರು ಜಗಳ ಬಿಡಿಸಿದ್ದೇವೆ ಎಂದು ನಿಪಿ-4 ರಂತೆ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಆರೋಪಿತರ ಪರ ವಕೀಲರಿಂದ ಇರುವುದಿಲ್ಲ.</u>

<u>ಮರು ವಿಚಾರಣೆ ಇರುವುದಿಲ್ಲ.</u>
(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಹಿರಿಯ ಸಿವಿಲ್
ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾಯಿಕ
ದಂಡಾಧೀಕಾರಿಗಳು, ಬೀದರ